ಬೆಳಿಗ್ಗೆ ಏನೋ ಕಬ್ಬಿಣ ಎತ್ತಾಗಿತ್ತು. ಮಧ್ಯಾಹ್ನ ಮಾತ್ರ ಬಶೀರನಿಗೆ ಕೈ ನೋಯುತ್ತಿತ್ತು. ಯಾರೂ ತನ್ನ ಕಡೆ ನೋಡದಿದ್ದಾಗ ಸ್ವಲ್ಪ ಹೊತ್ತು ಭುಜದ ಮೇಲೂ, ಕಲಶ ಹಿಡಿದುಕೊಂಡ ಹಾಗೂ, ಸ್ವಲ್ಪ ಹೊತ್ತು ಪಕ್ಕದಲ್ಲೇ ಇದ್ದ ಎತ್ತರದ ಬಾಕ್ಸಿನ ಮೇಲೂ ಇಡುತ್ತಿದ್ದ. ಕೈ ಅಷ್ಟೇ ಅಲ್ಲ. ಮುಖ್ಯವಾಗಿ ಬೆನ್ನು ಕಾಲುಗಳೂ ಜೋರಾಗಿ ನೋಯುತ್ತಿದ್ದವು. ಸುಮಾರು ನಾಲ್ಕು ಗಂಟೆಯಾಗಿರಬೇಕು 'ಅರ್ಧ ಗಂಟೆ ಹುಡುಕಿದೆನಲ್ಲೋ ಬೋಸುಡಿಕೆ' ಎಂದು ಬಶೀರನ ಹತ್ತಿರ ಬಂದ ಎರಡು ಸೆಮಿಸ್ಟರ್ ಸೀನಿಯರ್ ಶ್ರೀಕಾಂತ ಅಲಿಯಾಸ್ ಶಿರ್ಕ್ಯ ಕಿವಿಯಲ್ಲಿ ಏನೋ ಹೇಳಿ ಹೋದ. ಹೋಗುವಾಗ ಕೊನೆಯಲ್ಲಿ ಐದು ಗಂಟೆಗೆ ಮಾಗಡಿ ರೋಡ್ ಟೋಲ್‌ಗೇಟ್‌ನ ಪಕ್ಕದ ಪೆಟ್ರೋಲ್ ಬಂಕಿನ ಗಾಳಿ ಹಾಕುವಲ್ಲಿ ನಿಂತಿರುತ್ತೇನೆ ಎನ್ನುವುದನ್ನು ಎಲ್ಲರೂ ಕೇಳಿದ್ದರು. ಶಿರ್ಕ್ಯನ ಮಾತು ಕೇಳಿದ್ದೇ ಬಶೀರನ ಕೈ ಕಾಲು ಬೆನ್ನ ಮೂಳೆ ಕಾಲು ಪಾದಗಳಲ್ಲಿ ವಿದ್ಯುತ್ ಸಂಚಾರವಾದಂತಾಯಿತು. ನರ ನಾಡಿಗಳಲ್ಲಿ ಹೊಸ ಚೈತನ್ಯ ತುಂಬಿಕೊಂಡಂತಾಗಿ ಈಗಷ್ಟೇ ಚೆನ್ನಾಗಿ ನಿದ್ರೆಯಾಗಿ ಸ್ನಾನ ಮುಗಿಸಿ ಬಂದವರ ಹಾಗೆ ಫ್ರೆಶ್ ಆಗಿಬಿಟ್ಟಿದ್ದ.

ಇಂದು ಐದು ಗಂಟೆಯ ಮೇಲೂ ತನ್ನನ್ನು ಹಿಡಿದಿಟ್ಟುಕೊಂಡರೆ ನಾನು ನಾನಾಗಿರಲು ಸಾಧ್ಯವಿಲ್ಲ ಎಂದುಕೊಂಡ.

ಇನ್ನೇನು ಶಿರ್ಕ್ಯ ಆ ಕಡೆ ಹೋಗುತ್ತಿದ್ದಂತೆ ಎಚ್.ಓ.ಡಿ. ಇತ್ತ ಕಡೆಯಿಂದ ಬಂದು 'ಏನಪ್ಪ ಬಶೀರ? ಇಂದೇನು ತಪ್ಪು ಮಾಡಿದಿಯಪ್ಪಾ?' ಎಂದರು. ಅದನ್ನು ನೋಡಿದ ಸೆಂದಿಲ್ ಸರ್ ಓಡೋಡಿ ಬಂದು ಈ ಎರಡು ತಿಂಗಳಿಂದ ಮಾಡಿದ ತಪ್ಪುಗಳನ್ನೆಲ್ಲ ಎಳೆ ಎಳೆಯಾಗಿ ಬಿಡಿಸಿ ಹೇಳಲು ಪ್ರಾರಂಭಿಸುತ್ತಿದ್ದಂತೆ 'ಬೆಳಗಿಂದ ಆಫೀಸ್ ಕೆಲಸ ಎಂದು ಹೋದವನು ಈಗ ಬರುತ್ತಿದ್ದೇನೆ. ವಿವರವಾಗಿ ನಾಳೆ ಬೆಳಿಗ್ಗೆ ಮಾತನಾಡುವ' ಎನ್ನುತ್ತಾ ಬಶೀರನ ಕಡೆಗೆ ತಿರುಗಿ 'ಮಾನ ಮರ್ಯಾದೆ ಏನೂ ಇಲ್ಲವಾ ನಿನಗೆ, ಯಾಕಪ್ಪ ನೀನು ದಿನಾಲೂ ಅವರ ಕ್ಲಾಸಿಗೆ ಲೇಟಾಗಿ ಬರುವುದು' ಎಂದರು. ಅದಕ್ಕೆ ಬಶೀರ 'ಹೌದು ಸರ್ ತಪ್ಪಾಗಿದೆ. ಒಪ್ಪುತ್ತೇನೆ. ಆದರೆ ನೀವು ಒಂದು ತಿಳಿದುಕೊಳ್ಳಬೇಕು. ನನಗೂ ಕಾಲೇಜಿನ ಹೊರಗೆ ಒಂದು ಲೈಫ್ ಇದೆ' ಎಂದ. ತಮ್ಮ ಸರ್ವಿಸಿನಲ್ಲೇ ಈ ರೀತಿ ಉತ್ತರವನ್ನು ಬಹಳ ಕಡಿಮೆ ಕೇಳಿದ ಎಚ್.ಓ.ಡಿ. ಒಮ್ಮೇಲೆ ಮಾನಸಿಕವಾಗಿ ಕುಸಿದು, ಹೊರಗಿನಿಂದ ಕೆಂಡದಂತೆ ಪ್ರಕಟಗೊಂಡರು. ಸೀಳುವ ಧ್ವನಿಯಲ್ಲಿ 'ಏನು ಲೈಫ್... ಈತ ತಲೆಯೆಲ್ಲ ಮಾತನಾಡತಾ ಇದಾನೆ. ಇಂದು ಅವನನ್ನು ಕಳಿಸಿ. ನಾಳೆ ಕಾಲೇಜಿಗೆ ಹೊಕ್ಕಿಸಬೇಡಿ. ನೇರವಾಗಿ ನನ್ನ ಚೇಂಬರಿಗೆ ಕರೆದುಕೊಂಡು ಬನ್ನಿ... ಬೆಂಡು ಎತ್ತಬೇಕು' ಎಂದು ಹೇಳಿ ಹೊರಟು ಹೋದರು. ಅದನ್ನು ಕೇಳಿದ್ದೇ ಬಶೀರ ತನ್ನ ಕೈಯಲ್ಲಿದ್ದ ಎರಡೂ ಕಬ್ಬಿಣದ ಬ್ಲಾಕನ್ನು ಪಕ್ಕದಲ್ಲೇ ಇದ್ದ ಬಾಕ್ಸಿನ ಮೇಲೆ ಇಟ್ಟು ದಿನ ಬರುವ ಮತ್ತು ಹೋಗುವ ಟೈಮನ್ನು ಸೆರೆ ಹಿಡಿಯುವ ಮಶಿನ್ ಮುಂದೆ ಔಟ್ ಪಂಚ್ ಮಾಡಲು ಕ್ಯೂದಲ್ಲಿ ನಿಂತುಕೊಂಡ.

★★★

ಶುಕ್ರವಾರವಾದ್ದರಿಂದ ಐದು ಗಂಟೆ ಹೊಡೆಯುವ ಮೊದಲೇ ಸುಮಾರು ನಲವತ್ತಕ್ಕೂ ಹೆಚ್ಚು ಜನ ಪಂಚಿಂಗ್ ಮಶಿನ್ ಎದುರು ನಿಂತಿದ್ದರು. ಬಶೀರ ಔಟ್ ಪಂಚ್ ಮಾಡಿದವನೇ ತನ್ನ ಡ್ರೆಸ್ ಬದಲು ಮಾಡುವ ರೂಮಿಗೆ ಹೋಗಿ ತನ್ನೆಲ್ಲ ಪುಸ್ತಕ, ಯುನಿಫಾರಂ, ಕಲ್ಲಿನಂತಿರುವ ಇಂಡಸ್ಟ್ರಿಯಲ್ ಶೂವನ್ನು ಕಬೋರ್ಡಿನಲ್ಲಿ ಒಗೆದ. ಚಕಾ ಚಕ್ ಚಿಕ್ಕನ ಡ್ರೆಸ್ ಹಾಕಿಕೊಂಡು ಸೆಕ್ಯುರಿಟಿಗೆ ಬ್ಯಾಗ್ ತಪಾಸಣೆ ಮಾಡಲೂ ಕೊಡದೇ ಒಮ್ಮೆಲೇ ಜಿಗಿದು ಹೊರನಡೆದ. ರಾಜಾಜಿನಗರದ ವೆಸ್ಟ್ ಆಫ್ ಕಾರ್ಡ್ ರೋಡಿನಿಂದ ಮಾಗಡಿ ರೋಡ್ ಟೋಲ್‌ಗೇಟಿನ ದಾರಿಯಲ್ಲಿ ಫ್ಲೈಓವರ್ ಕೆಲಸ ನಡೆಯುತ್ತಿದ್ದ ಕಾರಣ ಇದು ಆಗುವುದಲ್ಲ ಹೋಗುವುದಲ್ಲ ಎಂದು ಯಾವುದೇ ಬಸ್ಸು ಹಿಡಿಯದೇ